**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಮಳವಳ್ಳಿ**

**ಸಿ ಸಿ ನಂ.1363/2023**

**ಫಿರ್ಯಾದುದಾರರು** :- ರಾಜ್ಯ ಪೋಲೀಸರು,
ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆ,

**: ವಿರುದ್ಧ :**

**ಆರೋಪಿತರು** :- 1. ಶ್ರೀ ಚಂದನ್ ಎನ್.ಡಿ.
ಬಿನ್ ಎನ್.ಡಿ.ಗೌಡ, 34 ವರ್ಷ,

2. ಶ್ರೀ.ಮಲ್ಲಿಕಾರ್ಜುನ ಉಃಕರಿಮಲ್ಲಿ
ಬಿನ್ ಲೇಟ್ ಕೆಂಪೇಗೌಡ ಉಃ ಗುಪ್ಪೊಜಿ ಚಿಕ್ಕಣ್ಣ,
35 ವರ್ಷ,

ಇಬ್ಬರ ವಾಸ ಃ ನೆಲಮಾಕನಹಳ್ಳಿ ಗ್ರಾಮ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

: ದೋಷಾರೋಪಣೆ :

ಶ್ರೀಮತಿ ಕಾವ್ಯಶ್ರೀ ಹೆಚ್.ಎಸ್., 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಆದ ನಾನು ನಿಮ್ಮಗಳ ವಿರುದ್ಧ ಹೊರಡಿಸಿರುವ ದೋಷಾರೋಪಣೆ ಏನೆಂದರೆ ಃ

ದಿನಾಂಕಃ 28.03.2023 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ನೆಲ್ಲೂರು (ಅಪ್ಪುಗೌಡನಹಳ್ಳಿ ಎಲ್ಲೆ) ಗ್ರಾಮದಲ್ಲಿ ಚಾಸಾ-1 ರವರ ಹೆಸರಿನಲ್ಲಿರುವ ಸರ್ವೆ ನಂಬರ್ 159/2, 159/4, 159/7, ಹಾಗೂ ಸದರಿಯವರು ಗುತ್ತಿಗೆ ಪಡೆದಿರುವ ಚಾಸಾ-3 ರವರ ಹೆಸರಿನಲ್ಲಿರುವ ಸರ್ವೆ ನಂಬರ್ 155/2 ಎ, ಚಾಸಾ-4 ರವರ ಹೆಸರಿನಲ್ಲಿರುವ ಸರ್ವೆ ನಂಬರ್ 159/2, ಚಾಸಾ-5 ರವರ ಹೆಸರಿನಲ್ಲಿರುವ ಸರ್ವೆ ನಂಬರ್ 157/4 ರ ಜಮೀನಿನಲ್ಲಿ ಚಾಸಾ-1 ರವರು ಹನಿ ನೀರಾವರಿ ಪೈಪ್ ಅಳವಡಿಸಿಕೊಂಡು ಕಲ್ಲಂಗಡಿ ಬೆಳೆ ಬೆಳೆದಿದ್ದು, 1 ಮತ್ತು 2 ನೇ ಆರೋಪಿತರು ಸದರಿ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ಭಾರತ ದಂಡ ಸಂಹಿತೆ ಕಲಂ.447 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಾಳಗೆ ಮಾಡಿದ್ದೀರೆಂದು,

ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಸದರಿ ಜಮೀನಿನಲ್ಲಿ ಅಳವಡಿಸಿದ್ದ ಹನಿ ನೀರಾವರಿ

ಪೈಪುಗಳನ್ನು ಹಾಗೂ ಗೇಟ್ ವಾಲ್ ಗಳನ್ನು 1ನೇ ಆರೋಪಿ ಕುಡುಗೋಲಿನಿಂದ ಹಾಗೂ 2ನೇ ಆರೋಪಿ ಕಲ್ಲಿ ನಿಂದ ಒಡೆದು ಹಾಕಿ, ಸದರಿ ಜಮೀನಿನಲ್ಲಿ ಬೆಳೆದಿದ್ದ ಕಲ್ಲಂಗಡಿ ಗಿಡಗಳನ್ನು ಕಿತ್ತು ಹಾಕಿ ಸುಮಾರು ರೂ.25,000/-ಗಳಷ್ಟು ನಷ್ಟವನ್ನುಂಟು ಮಾಡಿ, ಭಾರತ ದಂಡ ಸಂಹಿತೆ ಕಲಂ.427 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಾಳಗೆ ಮಾಡಿದ್ದೀರೆಂದು,

ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು, 1ನೇ ಆರೋಪಿ ಚಾಸಾ-1 ರವರಿಗೆ " ಇವತ್ತು ನಿನ್ನ ಗಿಡಗಳನ್ನು ಕಿತ್ತು ಪೈಪ್ ಗಳನ್ನು ಒಡೆದು ಹಾಕಿದ್ದೇವೆ, ಅದರಂತೆ ಮುಂದೊಂದು ದಿನ ನಿನ್ನ ಪ್ರಾಣವನ್ನು ಉಳಿಸುವುದಿಲ್ಲ, ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ" ಎಂದು ಕೊಲೆ ಬೆದರಿಕೆ ಹಾಕಿ, ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ. 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯಾಳಗೆ ಮಾಡಿದ್ದೀರೆಂದು ಅಪಾದಿಸಲಾಗಿದೆ.

ಪ್ರಶ್ನೆ - 1. ಮೇಲ್ಕಂಡಂತೆ ಓದಿ ಹೇಳಿದ ದೋಷಾರೋಪಣೆ ನಿಮಗೆ ತಿಳಿಯಿತೆ?

ಉತ್ತರ ಃ ಆರೋಪಿ 1
ಆರೋಪಿ 2

ಪ್ರಶ್ನೆ - 2. ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತೀರಾ?

ಉತ್ತರ ಃ ಆರೋಪಿ 1
ಆರೋಪಿ 2

(ಮೇಲ್ಕಂಡಂತೆ ದೋಷರೋಪಣೆಯನ್ನು ಆರೋಪಿತರಿಗೆ ತಿಳಿಯುವ ಕನ್ನಡ ಭಾಷ್ಟೆಯಲ್ಲಿ ಓದಿ ತಿಳಿಸಿ ಹೇಳಿದ್ದು, ಆರೋಪಿತರು ನೀಡುವ ಉತ್ತರವನ್ನು ಯಥಾವತ್ತಾಗಿ ನಾನೇ ಸ್ವತಃ ಬರೆದುಕೊಂಡಿರುವುದು ನಿಜವೆಂದು ದೃಢೀಕರಿಸುತ್ತೇನೆ.)

(ಕಾವ್ಯಶ್ರೀ ಹೆಚ್.ಎಸ್),
1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್ ಸಿ, ಮಳವಳ್ಳಿ.

ದಿನಾಂಕಃ21.09.2024